**ಆರ್ ಎ ನಂಃ43/2018**

**ಪಿ. ಡಬ್ಲ್ಯೂ ಃ 1**

**ದಿಃ 31.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಎದುರುದಾರರ 1 ಮತ್ತು 2 ಬಿ ರವರ ಪರ ಶ್ರೀ ಎಂ.ವಿ.ಎಸ್ ವಕೀಲರಿಂದ ಃ**

ನನ್ನ ಮತ್ತು ನನ್ನ ಪತಿಯ ವಿರುದ್ದ ಅಸಲು ದಾವೆ ಸಂಖ್ಯೆ 343/2007 ಹೂಡಿದ್ದು ನನಗೆ ಗೊತ್ತು.ಸದರಿ ದಾವೆಯಲ್ಲಿ ನನ್ನ ಪತಿಯ ಜೊತೆಗೆ ನಾನು ಕೂಡ ಪ್ರತಿ ದಿನಾಂಕ ನ್ಯಾಯಾಲಯಕ್ಕೆ ಬರುತ್ತಿದ್ದೆ. ಸದರಿ ದಾವೆಯ ತೀರ್ಪಿನ ದಿನಾಂಕ ನಾನು ಹಾಗೂ ನನ್ನ ಪತಿ ನ್ಯಾಯಾಲಯಕ್ಕೆ ಹೋಗಿದ್ದೇವು. ಆ ದಾವೆಯಲ್ಲಿ ಆದ ತೀರ್ಪಿನ ಬಗ್ಗೆ ತಿಳಿದುಕೊಂಡಿದ್ದೇನೆ. 2018 ರಲ್ಲಿ ಕಾಲಮಿತಿಯೊಳಗೆ ಮೇಲ್ಮನವಿ ಸಲ್ಲಿಸಲು ನನಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನ್ನ ಪತಿಗೆ ಆ ಸಮಯದಲ್ಲಿ ಆರೋಗ್ಯದ ಸಮಸ್ಯೆ ಆಗಿತ್ತು ಎನ್ನುತ್ತಾರೆ. ನನಗೆ ಇಬ್ಬರು ಮಕ್ಕಳಿರುತ್ತಾರೆ. ಒಬ್ಬ ಮಗ ಮತ್ತು ಒಬ್ಬ ಮಗಳು ಇರುತ್ತಾರೆ. ಅವರಿಬ್ಬರು ವಿದ್ಯಾವಂತರ ಎಂದರೆ ಸರಿ. ಮಗಳು ಡಾಕ್ಟರ್ ಆಗಿರುತ್ತಾರೆ. ಮಗ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಅವನು ಎಂ ಟಿ ಎ(ಮಾಸ್ಟರ್ ಆಫ್ ಟೂರಿಸಂ ಆಡ್ಮಿನಿಸ್ಟ್ರೇಷನ್) ಮಾಡಿದ್ದಾನೆ. ಎಲ್ಲ ವಿಚಾರ ತಿಳಿದಿದ್ದರೂ ಸಹ ಕಾಲ ಮಿತಿಯೊಳಗೆ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪತಿಗೆ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ಯಾವುದೆ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿಲ್ಲ. ನನ್ನ ಪತಿ ಆರೋಗ್ಯವಾಗಿದ್ದರೂ ಅವರಿಗೆ ಆರೋಗ್ಯ ಸರಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**